ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ಜಮೀನನ್ನು ಭೂರಹಿತ ಹರಿಜನ ಗಿರಿಜನರು ಸುಮಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರಿಗೆ

ಅದನ್ನು ಖಾಯಂ ಮಾಡಲು ಸರ್ಕಾರದವರು ೧೫-೮-೮೨ರ ವರೆಗೆ ಅರ್ಜಿ ಹಾಕಲು ಕಾಲಾವಕಾಶ ಕೊಟ್ಟಿದ್ದರು. ಆದರೆ ಸಾಕಷ್ಟು ತಿಳುವಳಿಕೆಯನ್ನು ಈ ಸಂಬಂಧವಾಗಿ ತಾಲ್ಲೂಕು ಮಟ್ಟದಲ್ಲಿ ಕಂದಾಯ ಅಧಿಕಾರಿಗಳು ಕೊಟ್ಟಿರುವುದಿಲ್ಲ. ಈ ಕಾರಣದಿಂದಾಗಿ ಹರಿಜನ ಗಿರಿಜನರಿಗೆ ಅರ್ಜಿ ಹಾಕಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ದಯವಿಟ್ಟು ೧೫-೮-೮೨ ತಾರೀಖಿನ ಕಾಲಮಿತಿಯನ್ನು ನಿಗದಿ ಮಾಡಿದ್ದೀರಿ. ಅದನ್ನು ತೆಗೆದುಹಾಕಿ ಹರಿಜನರಿಗೆ ಹೆಚ್ಚಿನ ಕಾಲಾವಕಾಶವನ್ನು ಕೊಡಬೇಕು. ಅವರು ಸಾಗುವಳಿ ಮಾಡುತ್ತಿರುವ ಜಮೀನನ್ನು ಖಾಯಂ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತೊಂದು ಕಡೆ ಹರಿಜನರು ಸಾಗುವಳಿ ಮಾಡುತ್ತಿರುವ ಜಮೀನಿನಲ್ಲಿ ಅರಣ್ಯ ಬೆಳೆಸುವ ಉದ್ದೇಶದಿಂದ ಅರಣ್ಯ ಇಲಾಖೆಯವರು ಅವರಿಂದ ಜಮೀನನ್ನು ಕಿತ್ತುಕೊಂಡು ಬೇರೆಯವರಿಗೆ ಕೊಟ್ಟಿರುವ ಪ್ರಕರಣಗಳು ಸಹ ನಡೆದಿವೆ. ಇದನ್ನು ತಡೆದು ಅವರಿಂದ ಜಮೀನು ತೆಗೆದು ಕೊಳ್ಳದಂತೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಂದಾಯ, ಕಾಮಗಾರಿ ಮಂತ್ರಿಗಳ ಪರವಾಗಿ).—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅವರ ಅಭಿಪ್ರಾಯದಂತೆ ಅವರಿಗೆ ಅನುಕೂಲ ಮಾಡಿಕೊಡಲು ಕಾನೂನು ಬದಲಾವಣೆ ಮಾಡಬೇಕೆಂದು ಈ ತಿದ್ದುಪಡಿ ಮಸೂದೆ ಉಭಯ ಸದನಗಳ ಜಂಟಿ ಸಲಹಾ ಸಮಿತಿಯ ಮುಂದಿದೆ. ಅವರ ವರದಿಯು ಇಲ್ಲಿ ಬರುತ್ತದೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ. —ಜಂಟಿ ಸಲಹಾ ಸಮಿತಿಯ ವರದಿ ಯಾವಾಗ ಬರುತ್ತದೆ ? ಇನ್ನು ಎಷ್ಟು ದಿವಸಗಳಲ್ಲಿ ಬರುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ರಿಪೋರ್ಟ್ ಬಂದ ತಕ್ಷಣ ಬರುತ್ತದೆ.

೧೭. ೫೫೧ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಅಧ್ಯಕ್ಷರು.—ಆಯಿತು. ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

೧೮. ೫೫೫ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಇದು ಪಿ.ಡಬ್ಲ್ಯೂ.ಡಿ.ಗೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಅವರಿಗೇ ಕಳಿಸಿದ್ದೇನೆ. ಆದ್ದರಿಂದ ಇದನ್ನು ಮುಂದಿನ ಸಲ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ಮುಂದೂಡಲಾಗಿದೆ.

ಮುಷ್ಕರ, ಬೀಗಮುದ್ರೆ ಮತ್ತು ಲೇ ಆಫ್‌ಗಳ ಬಗ್ಗೆ

೧೯ (೨೪೧ ಇ) ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.) ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ಮೂರು ವರ್ಷಗಳಿಂದ ಮುಷ್ಕರ, ಬೀಗಮುದ್ರೆ ಮತ್ತು ಲೇ ಆಫ್‌ಗಳಿಂದ ಕಳೆದು ಕೊಂಡ ಮಾನವ ದಿನಗಳೆಷ್ಟು ಹಾಗೂ ಅಂಥ ಪ್ರಸಂಗಗಳು ಎಷ್ಟು ?

ಆ) ಆ ವರ್ಷಗಳಲ್ಲಿ ಮುಚ್ಚುವಿಕೆ ಮತ್ತು ರಿಟ್ರೆಂಚ್‌ಮೆಂಟ್‌ನಿಂದ ಎಷ್ಟು ಜನ ಕೆಲಸಗಾರರು ಜೀವನೋಪಾಯವನ್ನು ಕಳೆದುಕೊಂಡಿದ್ದಾರೆ ಮತ್ತು ಅಂತಹ ಪ್ರತಿ ಪ್ರಸಂಗಗಳು ಮತ್ತು ಮುಚ್ಚಿಟ್ಟಿರುವ ಕಾಲ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ)

ವಿವರಗಳು	೧೯೮೪ ಸಂಖ್ಯೆ	೧೯೮೪ ಮಾನವದಿನ ನಷ್ಟ	೧೯೮೫ ಸಂಖ್ಯೆ	೧೯೮೫ ಮಾನವದಿನ ನಷ್ಟ	೧೯೮೬ ಸಂಖ್ಯೆ	೧೯೮೬ ಮಾನವದಿನ ನಷ್ಟ
ಮುಷ್ಕರ	೩೨	೫೮೭೦೨೬	೨೫	೩೮೪೫೦೪	೩೧	೧೨೧೦೭೬೭
ಭೀಗಮುದ್ರೆ	೭	೩೦೧೧೫೫	೮	೬೨೮೯೫	೬	೯೪೯೬೦
ವಿಸರ್ಜನೆ	೨೫	೬೧೬೫೩	೨೦	೧೩೩೨೫೯	೨೪	೩೭೩೫೫೪

ಆ)

ವಿವರಣೆಗಳು	೧೯೮೪ ಪ್ರಕರಣಗಳ ಸಂಖ್ಯೆ	೧೯೮೪ ಭಾದಿತ ಕೆಲಸಗಾರರ ಸಂಖ್ಯೆ	೧೯೮೫ ಪ್ರಕರಣಗಳ ಸಂಖ್ಯೆ	೧೯೮೫ ಭಾದಿತ ಕೆಲಸಗಾರರ ಸಂಖ್ಯೆ	೧೯೮೬ ಪ್ರಕರಣಗಳ ಸಂಖ್ಯೆ	೧೯೮೬ ಭಾದಿತ ಕೆಲಸಗಾರರ ಸಂಖ್ಯೆ
ಮುಚ್ಚುವಿಕೆ	೧	೫೨	೨	೫೨೧	೧	೩೦
ತೆಗೆದು ಹಾಕುವಿಕೆ	೨	೫೫	೨	೧೪	—	—

ಕಳೆದುಕೊಂಡ ಮಾನವ ದಿನಗಳಲ್ಲಿ ಮುಚ್ಚಲ್ಪಟ್ಟ ಕಾಲವು ಸೇರಿದೆ.

ಶ್ರೀ ಟಿ. ಎಸ್. ಮಣಿ.—ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ ನನ್ನ ಪ್ರಶ್ನೆಯನ್ನು ಮುಂದಕ್ಕೆ ಹಾಕಿ.

SRI A. LAKSHMISAGAR.—You don't want me to answer.

SRI M. S. KRISHNAN.—We don't disrespect but the point is, it is a question of procedure and it is a question of protection and right of the Member. You have to give protection and give a ruling.

ಅಧ್ಯಕ್ಷರು.—ಮುಂದೆ ಹೋಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮದ ಬಗ್ಗೆ

೮ (೧೯೮) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಶಿವಮೊಗ್ಗ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಈ ವರ್ಷ ಬರಗಾಲಕ್ಕೆ ತುತ್ತಾದ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ಡಿಸೆಂಬರ್ ತಿಂಗಳ ನಂತರ ಈವರೆಗೆ ಪ್ರತಿ ತಾಲ್ಲೂಕಿನಲ್ಲಿ ಹೊಸದಾಗಿ ಕೈಕೊಂಡ ಬರಗಾಲ ಕಾಮಗಾರಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಯೋಜನಾ ಹಾಗೂ ಕಾರ್ಮಿಕ ಕಂದಾಯ ಮಂತ್ರಿಗಳು.—